

2003 ರ ಸಾಲಿನಲ್ಲಿ ಹರಿಶ್ಚಂದ್ರ ಭಟ್ ಅವರಿಂದ ಸಂಕಲ್ಪಗೊಂಡು ಸಿದ್ದಾಪುರದ ಕರ್ಜಗಿಯಲ್ಲಿ ಪ್ರಾರಂಭವಾದ 'ಮನುವಿಕಾಸ' ಸ್ವಯಂಸೇವಾ ಸಂಸ್ಥೆ, ಜಿಲ್ಲೆಯಲ್ಲಿ ಇಂದು ಸಾಕಷ್ಟು ಗಟ್ಟಿ ಹೆಜ್ಜೆ ಮೂಡಿಸಿದೆ. ನಬಾರ್ಡ್, ಹುಬ್ಬಳ್ಳಿಯ ದೇಶಪಾಂಡೆ ಪ್ರತಿಷ್ಠಾನ, ದಾನಿಗಳ ಸಹಾಯದಿಂದ ಚೇತರಿಕೆ ಪಡೆದು ಕೃಷಿ, ಮಹಿಳಾ ಸಬಲೀಕರಣ, ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿಯೂ ಸಾಫಲ್ಯ ಕಂಡುಕೊಂಡಿದೆ.

**ಕೃಷಿಕರ ಬಾಳಿನ ಆತ್ಮಸಾಥ್**

# ಕರಾವಳಿಗುಂಟ ಮನುವಿಕಾಸದ ದಿಟ್ಟ ಹೆಜ್ಜೆ



ನೀರಿಂಗಿಸುವ ಹೊಂಡಗಳು ಇನ್ನೂ ಅಷ್ಟು ಜನಪ್ರಿಯವಾಗದ ಕಾಲ ಅದು. ಆಗಲೇ, ಅಂದರೆ ಸುಮಾರು ಮೂರು ವರ್ಷಗಳ ಹಿಂದೆ ಸಿದ್ದಾಪುರ ತಾಲೂಕಿನ ಮೂಡಳ್ಳಿಯಲ್ಲಿ ಮನುವಿಕಾಸ ಸಂಸ್ಥೆ ನೀರಿಂಗಿಸುವ ಹೊಂಡಗಳ ನಿರ್ಮಾಣ ಮಾಡುವ ಮೂಲಕ ಆ ಭಾಗದಲ್ಲಿ ಅಂತರ್ಜಲದ ಮಟ್ಟ ಹೆಚ್ಚಳಕ್ಕೆ ಕೊಡುಗೆ ನೀಡಿದೆ. ಸದ್ದಿಲ್ಲದೆ ಕೆಲಸ ಮಾಡುತ್ತಿರುವ ಈ ಸಂಸ್ಥೆ ಈಗ ಜಿಲ್ಲೆಯಲ್ಲಿ ಕಾರ್ಯವ್ಯಾಪ್ತಿ ವಿಸ್ತರಿಸಿಕೊಂಡಿದೆ.

ಮನುವಿಕಾಸ ಸಂಸ್ಥೆ ಸ್ವಯಂಸೇವಕರ ತಂಡದಿಂದ ಕೂಡಿರುವ ಸಂಸ್ಥೆ. ಇದು ಗ್ರಾಮಗಳತ್ತ ಮುಖ ಮಾಡಲು ಯುವಕರನ್ನು ಪ್ರೇರೇಪಿಸುತ್ತಿದೆ. ವಾತಾವರಣದಲ್ಲಿ ಜೀವವೈವಿಧ್ಯವನ್ನು ಕಾಪಾಡುವ ಮಹತ್ತರ ಕನಸನ್ನೂ ಹೊಂದಿದೆ. ಸುಸ್ಥಿರ ಕೃಷಿ ಮತ್ತು ಪರಿಸರ ಸಂರಕ್ಷಣೆಗೆ ಮನುವಿಕಾಸ ನೀಡುವ ಒತ್ತು ಗುರುತರವಾದುದು.

**ಗುರುಗಣೇಶ ಭಟ್ಟ ಡಬ್ಗುಳಿ**

ಈ ನಿಟ್ಟಿನಲ್ಲಿ ಶಿರಸಿ ತಾಲೂಕಿನ ಹಾರೂಗಾರದ ಸಮೀಪದ ಹಲವೆಡೆ ವಿವಿಧ ಸಂಸ್ಥೆಗಳ ಸಹಭಾಗಿತ್ವದಲ್ಲಿ ಮಳೆ ನೀರು ಇಂಗಿಸುವ ಹೊಂಡ ನಿರ್ಮಿಸಿದೆ. ಇಂದು ಪ್ರತಿಯೊಂದು ಹೊಂಡವೂ ಸುಮಾರು ಸಾವಿರ ಲೀಟರಿಗೂ ಹೆಚ್ಚಿನ ನೀರನ್ನು ಪ್ರತಿವರ್ಷವೂ ಇಂಗಿಸುವ ತಾಕತ್ತು ಹೊಂದಿದೆ. ಈ ಭಾಗದಲ್ಲಿ ಬಿರು ಬೇಸಿಗೆಯಲ್ಲೂ ಇಂದು ಹಸಿರು ಉಸಿರಾಡುತ್ತಿದೆ.

**ಕಾರ್ಯವ್ಯಾಪ್ತಿ**

ಸಿರ್ಸಿ, ಸಿದ್ಧಾಪುರ, ಯಲ್ಲಾಪುರ, ಮುಂಡಗೋಡ ಸೇರಿದಂತೆ ಹಾವೇರಿ ಜಿಲ್ಲೆಯ ಹಲವು ಊರುಗಳಿಗೆ ನೆರವು, ಆಸರೆ ಒದಗಿಸುತ್ತಿದೆ. ಕೃಷಿಕರ ಬಾಳನ್ನು ಹಸನಾಗಿಸಲು ಕೈ ಜೋಡಿಸಿದೆ. ಉತ್ತರಕನ್ನಡದಲ್ಲಿ ಅಡಕೆ ಮತ್ತು ತೆಂಗಿನ ತೋಟದ ಕೃಷಿಯೇ ಹೆಚ್ಚು. ಅಡಿಕೆ ತೋಟಗಳಿಗೆ ಪೋಷಕಾಂಶ ಒದಗಿಸಲು ಸೊಪ್ಪಿನ ಆಸರೆ ನೀಡಲಾಗುತ್ತಿದೆ. ಅಂದಿನ ಬ್ರಿಟಿಷ್ ಕಾಲದಿಂದಲೂ ಸಾಗಿಬಂದ ಸೊಪ್ಪಿನ ಬೆಟ್ಟಗಳು ಎಂದೇ ಹೆಸರುವಾಸಿಯಾದ ಗುಡ್ಡಗಳು ಕ್ಷೀಣಿಸುತ್ತಿವೆ.

ಈ ಹೊತ್ತು ಅರಣ್ಯನಾಶ ಸಾಮಾನ್ಯವಾಗಿದೆ. ನಿರ್ವಹಣೆ ಸೋತಿದೆ. ಬೆಟ್ಟ ಕಳಚಿ ಮಣ್ಣಿನ ಕುಸಿತ ಚಿಂತೆಗೆ ಎಡೆಮೂಡಿಸುತ್ತಿದೆ. ಮನುವಿಕಾಸ ಈ ನಿಟ್ಟಿನಲ್ಲಿ ಮಣ್ಣಿನ ಫಲವತ್ತತೆ ಕಾಪಾಡಲು ತೋಳು ಏರಿಸಿ ನಿಂತಿದೆ. ಕೃಷಿಕರ ಗೆಳೆಯನಾಗಿ ಸಾಥ್ ನೀಡುತ್ತಿದೆ.ಅಂತಾರಾಷ್ಟ್ರೀಯ ಪರಿಸರ ಸಂರಕ್ಷಣಾ ಒಕ್ಕೂಟವು ಅಳಿವಿನಂಚಿನ ಪ್ರಭೇಧಗಳೆಂದು ಗುರುತಿಸಿದ ಅಂದಾಜು 40 ಸಾವಿರಕ್ಕೂ ಹೆಚ್ಚಿನ ಸಂಖ್ಯೆಯ ಸಸಿಗಳನ್ನು ಜಿಲ್ಲೆಯ ರೈತರಿಗೆ ವಿತರಿಸಿದೆ. ಇದರಿಂದ ಸೊಪ್ಪಿನ ಬೆಟ್ಟದಲ್ಲಿ ಜೈವಿಕ ಚಟುವಟಿಕೆ ಗರಿಗೆದರಿದೆ. ರೈತರ ತೋಟಕ್ಕೆ ಲಭಿಸುವ ಸೊಪ್ಪಿನ ಪ್ರಮಾಣವೂ ಹೆಚ್ಚಾಗಿದೆ. ಬೆಟ್ಟದ ಖಾಲಿ ಜಾಗಗಳಲ್ಲಿ ಹಸಿರು ಚಿಗುರಿದೆ.

**ಚೇತರಿಕೆಯ ಯೋಜನೆ**

ಗ್ರಾಮೀಣ ಭಾಗದಲ್ಲಿ ಸುಮಾರು 1200 ಸ್ವಯಂ ಸೇವಾ ಸಂಸ್ಥೆಗಳಿಗೆ ಉತ್ತೇಜನ ನೀಡುವ ಯೋಜನೆಗಳನ್ನು ಮನುವಿಕಾಸವು ರೂಪಿಸುತ್ತಿದೆ. 1900 ಸಾವಿರ ಕುಟುಂಬಗಳು ತಾವು ಉಳಿಸಿದ ಹಣ ತೊಡಗಿಸಲು ಮನುವಿಕಾಸದ ಪ್ರಾಯೋಜಕತ್ವದಲ್ಲಿ ಪ್ರಗತಿಮಿತ್ರ ಸೌಹಾರ್ದ ಸಹಕಾರಿ ಎಂಬ ಸಂಘವನ್ನು ಪ್ರಾರಂಭಿಸಿದೆ.

ಸ್ಥಳೀಯ ಅಡಿಕೆ ಮತ್ತು ಭತ್ತದ ಬೆಳೆಗಾರರ ಮೂಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಸೇವಾ ಕಂಪನಿ ಪ್ರಾರಂಭಿಸಲಾಗಿದೆ. ತರಕಾರಿ, ಕಾಳುಮೆಣಸು, ಜೋಳ ಬೆಳೆಯಲು ಉತ್ತೇಜಿಸುತ್ತಿದೆ. ಕಡಿಮೆ ಬಡ್ಡಿ ದರದ ಸಾಲ ಸೌಲಭ್ಯ ಒದಗಿಸುತ್ತಿದೆ.

ರೈತರ ಉತ್ಪನ್ನಗಳಿಗೆ 'ಹೆಚ್ಚಿನ ಬೆಲೆ ಒದಗಿಸುವ ಪ್ರಯತ್ನವೂ ಜಾರಿಯಲ್ಲಿದೆ. ಯಾವ ಭೂಮಿಯೂ ಯಾವ ಕಾರಣಕ್ಕೂ ಬರಡು ಬೀಳಬಾರದೆಂಬ ಕಾರಣಕ್ಕೆ ಕೃಷಿಗೆ ಯೋಗ್ಯವಲ್ಲದ ಜಾಗದಲ್ಲೂ ಬೆಳೆ ಬೆಳೆಯಲು ಸೌಲಭ್ಯ ಒದಗಿಸುವ ವಿಶೇಷ ಯೋಜನೆಗಳನ್ನೂ ಮನುವಿಕಾಸ ಹಮ್ಮಿಕೊಂಡಿದೆ.

ಅರ್ಹ ಪ್ರತಿಭಾನ್ವಿತ ಗ್ರಾಮೀಣ ಶಾಲಾ ಮಕ್ಕಳನ್ನು ಗುರುತಿಸಿ ಶೈಕ್ಷಣಿಕ ಸಲಕರಣೆ, ಸೌಲಭ್ಯ ಒದಗಿಸುತ್ತಿದೆ. ಪ್ರಸ್ತುತ ಗಣೇಶ ಭಟ್ಟರ ನೇತೃತ್ವದಲ್ಲಿ ತಂಡ ಕೃಷಿಕರ ಸ್ನೇಹಿತನಾಗಿ ಸಾಗುತ್ತಿದೆ. ಪ್ರಾರಂಭದ ಅಧ್ಯಕ್ಷ ಹರಿಶ್ಚಂದ್ರ ಭಟ್ ಅವರು ನಿರ್ದೇಶಕರಾಗಿ ಬೆಂಗಾವಲಿಗಿದ್ದಾರೆ.



